**ಓ ಎಸ್ ನಂಃ 329/2020**
**ಪಿ. ಡಬ್ಲ್ಯೂ ಃ 2**

**ದಿಃ 20.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್ ಎಸ್ ಎಸ್ ವಕೀಲರಿಂದ**

**ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

ನನ್ನ ತಂದೆ ತೀರಿಕೊಂಡಿರುತ್ತಾರೆ. ಸಾಕ್ಷಿಗೆ ನಿ ಪಿ 2 ನ್ನು ತೋರಿಸಲಾಗಿ ಸಾಕ್ಷಿ ನಿ ಪಿ 2 ರಲ್ಲಿ ಅವರ ತಂದೆ ಸಹಿ ಮಾಡಿರುವುದಾಗಿ ಒಪ್ಪಿಕೊಂಡಿದ್ದರಿಂದ ನಿ ಪಿ 2 ರಲ್ಲಿ ಇರುವ ಸಾಕ್ಷಿಯ ತಂದೆಯ ಸಹಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ನಿ ಪಿ 2 ಎ ಎಂದು ಗುರುತಿಸಲಾಯಿತು. ನನ್ನ ತಂದೆ ಸಹಿ ಮಾಡಿರುವ ಒಂದು ದಾಖಲಾತಿಯನ್ನು ನ್ಯಾಯಾಲಯಕ್ಕೆ ನಾನು ತಂದಿದ್ದು, ಸದರಿ ದಾಖಲಾತಿಯಲ್ಲಿ ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ದಾಖಲಾತಿಯನ್ನು ನಿಪಿ 23 ಎಂದು ಗುರುತಿಸಲಾಯಿತು. ಸದರಿ ನಿ ಪಿ 23 ರಲ್ಲಿ ಇರುವ ನನ್ನ ತಂದೆಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ನಿ ಪಿ 23 ಎ ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯಲ್ಲಿ ನನ್ನ ಸಹಿಯೂ ಇದ್ದು, ಸಾಕ್ಷಿಯ ಸಹಿಯನ್ನು ಸಾಕ್ಷಿ ಗುರುತಿಸಿದ ಮೇರೆಗೆ ಸಹಿಯನ್ನು ನಿ ಪಿ 23 ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿ 1 ಮತ್ತು 2 ರವರ ಪರ ಶ್ರೀ ಎಂ ಜಿ ಆರ್ ವಕೀಲರಿಂದ ಃ**

ನನ್ನ ತಂದೆ ವಾದಿಯ ತಂದೆಯ ತಂಗಿಯ ಮಗ ಎಂದರೆ ಸುಳ್ಳು. ನನ್ನ ಅಜ್ಜಿ ನಂಜಮ್ಮ ಮತ್ತು ವಾದಿಯ ತಂದೆ ರಾಮಯ್ಯ ನವರಿಗೆ ಯಾವುದೆ ಸಂಬಂಧ ಇರುವುದಿಲ್ಲ. **ನನ್ನ ತಂದೆ ನಿವೃತ್ತ ಉಪ ನೋಂದಾಣಾಧಿಕಾರಿಯಾಗಿದ್ದರು ಎಂದರೆ ಸರಿ. ವಾದಿಯ ಕುಟುಂಬದ ಹಿತೈಷಿ ಮತ್ತು ಬಂಧುಗಳಾಗಿದ್ದರಿಂದ ನಮ್ಮ ತಂದೆ ಅವರ ಕುಟುಂಬಸ್ಥರು ವಿಭಾಗ ಮಾಡಿಕೊಂಡಾಗ ವಿಭಾಗ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ಸಾಕ್ಷಿಗೆ ವಿಭಾಗಪತ್ರವನ್ನು ತೋರಿಸಲಾಗಿ ಸಾಕ್ಷಿಯು ಸದರಿ ವಿಭಾಗಪತ್ರಕ್ಕೆ ನನ್ನ ತಂದೆ ಸಹಿ ಮಾಡಿರುತ್ತಾರೆಂದು ಗುರುತಿಸಿದ ಮೇರೆಗೆ ಸದರಿ ನೋಂದಾಯಿತ ವಿಭಾಗಪತ್ರದ ದೃಢೀಕೃತ ನಕಲನ್ನು ನಿ ಡಿ 12 ಎಂದು ಗುರುತಿಸಲಾಯಿತು.**

**ನಿ ಪಿ 2 ಕ್ಕೆ ಸಹಿ ಮಾಡಿದ ದಿನವೇ ಅಂದರೆ ದಿನಾಂಕ ಃ 25.11.2006 ರಂದು ಕೃಷ್ಣಪ್ಪ ರವರ ತಂದೆ ಮತ್ತು ತಾಯಿಯವರಾದ ರಾಮಯ್ಯ ಮತ್ತು ಚಿಕ್ಕಮ್ಮ ರವರ ಮರಣ ಶಾಸನಕ್ಕೆ ಅದೇ ದಿನ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ಸಾಕ್ಷಿಗೆ ಸದರಿ ಮರಣ ಶಾಸನದ ದೃಢೀಕೃತ ನಕಲನ್ನು**

ತೋರಿಸಲಾಗಿ ಅದನ್ನು ಸಾಕ್ಷಿ ಗುರುತಿಸಿದ ಮೇರೆಗೆ ನಿ ಡಿ 13 ಎಂದು ಗುರುತಿಸಲಾಯಿತು. ನನ್ನ ತಾತನ ಹೆಸರು ನಂಜಪ್ಪ ಇರುತ್ತದೆ. ನಮ್ಮ ಅಜ್ಜಿ ನಂಜಮ್ಮ ರವರ ತಂದೆಯ ಹೆಸರು ಗೊತ್ತಿಲ್ಲ. ರಾಮಯ್ಯ ರವರ ಇನ್ನೊಬ್ಬ ಸಹೋದರಿ ನಂಜಮ್ಮ ನವರ ತಂದೆ ಹನುಮಂತಯ್ಯ ಎಂದರೆ ಗೊತ್ತಿಲ್ಲ. ನನ್ನ ತಂದೆ ಮತ್ತು ನಂಜಮ್ಮ ರವರ ಸ್ವಂತ ತಂದೆ ಹನುಮಂತಯ್ಯ ಎಂದರೆ ಗೊತ್ತಿಲ್ಲ. ಮೇಲಿನ ವಿಷಯ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿ, ನಾನು ಮತ್ತು ಪ್ರತಿವಾದಿಗಳೆಲ್ಲ ಒಂದೇ ಕುಟುಂಬದವರಾಗಿದ್ದು, ಅವರ ಕುಟುಂಬದ ಆಸ್ತಿಗಳನ್ನು ಅದಲು ಬದಲು ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. 1973 ರಲ್ಲಿ ನಾನು ಹುಟ್ಟಿರಲಿಲ್ಲ ಎಂದು ದಾಖಲಾತಿಯನ್ನು ನೋಡಿ ಸಾಕ್ಷಿ ನುಡಿದಿರುತ್ತಾರೆ. ಈ ಹಂತದಲ್ಲಿ ವಾದಿಯ ಪರ ವಕೀಲರು ಸದರಿ ಪ್ರಶ್ನೆಗೆ ತಕರಾರು ಮಾಡಿದ್ದು, ಸದರಿ ಪ್ರಶ್ನೆಯನ್ನು ತಕರಾರಿನ ಮೇರೆಗೆ ರೆಕಾರ್ಡ್ ಮಾಡಲಾಗಿದೆ.

ನನ್ನ ಕುಟುಂಬದಲ್ಲಿ ಸ.ನಂ. 83/3, 83/4 ಮತ್ತು 83/5 ಸ್ವತ್ತುಗಳು ಇರುತ್ತವೆ. ಅದರ ಹಳೆಯ ಸ.ನಂಬರ್ ಗಳು ನನಗೆ ಗೊತ್ತಿರುವುದಿಲ್ಲ. ನಿ ಪಿ 2 ರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಖುದ್ದು ಮಾಹಿತಿ ಇರುವುದಿಲ್ಲ. ನಮ್ಮ ತಂದೆ ನಿವೃತ್ತ ಉಪ ನೋಂದಾಣಾಧಿಕಾರಿಯಾಗಿದ್ದರಿಂದ ಅವರಿಗೆ ಡಿಡ್ ಬರೆಯುವುದು ಮತ್ತು ನೋಂದಣಿ ಮಾಡಿಸುವ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿ. ನನ್ನ ತಂದೆ ವಾದಿಗಳ ಹಿತೈಷಿಯಾಗಿದ್ದ ಕಾರಣ ಸದರಿ ವಿಲ್ ನ್ನು ತಯಾರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಿನ ಕೃಷ್ಣಪ್ಪ ನವರ ಅಣ್ಣ ಹನುಮಂತಯ್ಯ ನನ್ನ ಜೊತೆ ಬಂದಿರುತಾತರೆ ಎಂದರೆ ಸರಿ. ನಾನು ಹನುಮಂತಯ್ಯ ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು. ನನಗೆ ವಿಷಯ ಗೊತ್ತಿದ್ದರೂ ಕೆಲವು ಸಂಗತಿಗಳನ್ನು ಮರೆಮಾಚಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ.**

ಓ ಎಸ್ ನಂಃ 329/2020

ಪಿ. ಡಬ್ಲ್ಯೂ ಃ 3

**ದಿಃ 20.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್ ಎಸ್ ಎಸ್ ವಕೀಲರಿಂದ**

**ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

ನಿ ಪಿ 2 ರಲ್ಲಿ ನಾನು ಸಹಿ ಮಾಡಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನಿ ಪಿ 2 ಬಿ ಎಂದು ಗುರುತಿಸಲಾಯಿತು.

ಕೃಷ್ಣಪ್ಪ ನವರು ನಿ ಪಿ 2 ಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು, ಸದರಿ ಹೆಬ್ಬೆಟ್ಟಿನ ಗುರುತನ್ನು ನಾನೇ ಗುರುತಿಸಿದ್ದು, ಸದರಿ ಹೆಬ್ಬೆಟ್ಟಿನ ಗುರುತಿನ ಕೆಳಗೆ ಬರಹ ಬರೆದಿರುವುದು ಮತ್ತು ಅದರ ಕೆಳಗೆ ಇರುವ ಸಹಿ ನನ್ನದೇ ಆಗಿರುತ್ತದೆ ಎಂದು ಸಾಕ್ಷಿ ಸಹಿಯನ್ನು ಗುರುತಿಸಿದ್ದು ಅದನ್ನು ನಿ ಪಿ 2 ಸಿ ಎಂದು ಗುರುತಿಸಲಾಯಿತು.

ನಾನು ನೋಂದಣಿಯಾಗುವಾಗ ನಿ ಪಿ 2ಕ್ಕೆ ಸಹಿ ಮಾಡಿದ್ದು, ಸದರಿ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ನಿಪಿ 2 ಡಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಪ್ರತಿವಾದಿ 1 ಮತ್ತು 2 ರವರ ಪರ ಶ್ರೀ ಎಂ ಜಿ ಅರ್ ವಕೀಲರಿಂದ ಃ**

ನನಗೆ ಕೃಷ್ಣಪ್ಪ ನವರ ಪರಿಚಯ ಇರುತ್ತದೆ. ನಾನು ಅವರ ಊರಿಗೆ ಹೋಗಿ ಬರುವುದು ಮಾಡುತ್ತಿರುತ್ತೇನೆ. ನನಗೆ ಕೃಷ್ಣಪ್ಪ ನವರ ಪರಿಚಯ ಅವರ ಅಣ್ಣ ಹನುಮಂತಯ್ಯ ನವರ ಕಡೆಯಿಂದ ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಕೃಷ್ಣಪ್ಪ ನವರು ನೇರ ಪರಿಚಯ ಇರುತ್ತಾರೆ ಎಂದು ನುಡಿಯುತ್ತಾರೆ. ನಾನು ಬೆಂಗಳೂರಿನಲ್ಲಿ ಇರುವ ಮೈಸೂರು ರಸ್ತೆ, ಕಸ್ತೂರಬಾ ನಗರದಲ್ಲಿ ವಾಸವಾಗಿರುತ್ತೇನೆ. ಕೃಷ್ಣಪ್ಪ ನವರು 15 ವರ್ಷಗಳ ಹಿಂದೆ ನನ್ನ ಮನೆಗೆ ಬಂದಿದ್ದರು.

ನಿ ಪಿ 2 ರಲ್ಲಿ ಸಹಿ ಮಾಡಲು ನನ್ನನ್ನು ಕೃಷ್ಣಪ್ಪ ನವರು ಕರೆದಿದ್ದರು. 2006 ರಲ್ಲಿ ನಿಪಿ 2 ನೋಂದಣಿಯಾಗುವ ದಿನ ನನ್ನನ್ನು ಕರೆದಿದ್ದರು. ನಾನು ಹೋದ ಮೇಲೆ ಕೃಷ್ಣಪ್ಪ ನವರು

ಸದರಿ ವಿಲ್ ನ್ನು ತಯಾರಿಸಿದರು. ಸದರಿ ವಿಲ್ ಗೆ ಸಂಬಂಧಪಟ್ಟ ಛಾಪಾ ಕಾಗದವನ್ನು ಕೃಷ್ಣಪ್ಪ ನವರು ತಂದಿದ್ದರು. ಕೃಷ್ಣಪ್ಪ ನವರ ವಿದ್ಯಾಭ್ಯಾಸ ನನಗೆ ನೆನಪಿಲ್ಲ, ಸಾಕ್ಷಿಯು ಮುಂದುವರೆದು ಅವರು ಅಷ್ಟು ಓದಿರುವುದಿಲ್ಲ, ಅವರು ಹೆಬ್ಬೆಟ್ಟು ಹಾಕುತ್ತಿದ್ದರು ಎಂದು ನುಡಿಯುತ್ತಾರೆ.

ಕೃಷ್ಣಪ್ಪ ನವರಿಗೆ ಕಿವುಡು ಇದ್ದು, ಅವರಿಗೆ ಸರ್ಕಾರದಿಂದ ಮಾಸಾಶನ ಬರುತ್ತಿತ್ತು ಎಂದರೆ ಗೊತ್ತಿಲ್ಲ. ಸದರಿ ವಿಲ್ ನ್ನು ಕೃಷ್ಣಪ್ಪ ನವರು ಬರಹಗಾರರ ಹತ್ತಿರ ಹೇಳಿ ಬರೆಯಿಸಿರುತ್ತಾರೆ. ಅವರ ಹೆಸರು ನನಗೆ ನೆನಪಿಲ್ಲ. ವಿಲ್ ನ್ನು ಬೆಳಿಗ್ಗೆ 10 ಗಂಟೆಗೆ ಬರೆಯಿಸಲು ಶುರು ಮಾಡಿ ಮಧ್ಯಾಹ್ನದ ಹೊತ್ತಿಗೆ ಮುಗಿದಿರುತ್ತದೆ. ಅದು ಎಷ್ಟು ಗಂಟೆಗೆ ಎಂದು ನನಗೆ ನೆನಪಿಲ್ಲ. ಸದರಿ ವಿಲ್ ನ್ನು ಕೃಷ್ಣಪ್ಪ ನವರು ಡ್ರಾಫ್ಟ್ ಮಾಡಿಸಿದ್ದು, ಅದರ ಬೆರಳಚ್ಚು ಟೈಪಿಸ್ಟ್ ಮಾಡಿರುತ್ತಾರೆ. ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಕೃಷ್ಣಪ್ಪ ನವರು ಎಷ್ಟು ಹಣಕ್ಕೆ ಛಾಪಾ ಕಾಗದವನ್ನು ತಂದಿದ್ದರು ಎಂದು ನನಗೆ ನೆನಪಿರುವುದಿಲ್ಲ. ಅವರು ನನ್ನ ಮುಂದು ಛಾಪಾ ಕಾಗದವನ್ನು ತಂದರು, ಆದರೆ ಅದನ್ನು ಎಷ್ಟು ಹಣಕ್ಕೆ ತಂದರು ಎಂದು ನನಗೆ ನೆನಪಿರುವುದಿಲ್ಲ. ಸದರಿ ವಿಲ್ ನ್ನು ಕೃಷ್ಣಪ್ಪ ನವರು ಹೇಳಿದ ಮೇರೆಗೆ ಬೆರಳಚ್ಚು ಗಾರರು ಟೈಪ್ ಮಾಡಿರುತ್ತಾರೆ.

ವಿಲ್ ನಲ್ಲಿರುವ ಎಲ್ಲ ಬರವಣಿಗೆಗಳನ್ನು ಕೃಷ್ಣಪ್ಪ ನವರೇ ಹೇಳಿ ಬರೆಯಿಸಿರುತ್ತಾರೆ. ಕೃಷ್ಣಪ್ಪ ನವರಿಗೆ ಇಂಗ್ಲೀಷ್ ಜ್ಞಾನ ಮತ್ತು ಕಾನೂನಿನ ಅರಿವು ಸಾಮಾನ್ಯವಾಗಿತ್ತು. ಸಾಕ್ಷಿ ಮುಂದುವರೆದು ಅವರು ಇಂಗ್ಲೀಷ್ ಓದಿರುವುದಿಲ್ಲ ಎಂದು ನುಡಿಯುತ್ತಾರೆ. ವಿಲ್ ಬರೆದ ನಂತರ ಕೃಷ್ಣಪ್ಪ ನವರು ನನಗೆ ಓದಿ ವಿಲ್ ನಲ್ಲಿ ಬರೆದಿರುವುದನ್ನು ಹೇಳಲಿಲ್ಲ, ನಾನೇ ಓದಿರುತ್ತೇನೆ, ಸರಿಯಾಗಿರುತ್ತದೆ. ಸ.ನಂ. ಮತ್ತು ವಿಸ್ತೀರ್ಣ ನನಗೆ ಈಗ ನೆನಪಿರುವುದಿಲ್ಲ. ಚೆಕ್ ಬಂದಿ ಯೂ ಕೂಡ ನನಗೆ ನೆನಪಿರುವುದಿಲ್ಲ. ವಿಲ್ ನಲ್ಲಿ ಕೃಷ್ಣಪ್ಪ ನವರು ಅವರ ಅಣ್ಣನ ಮಗನಿಗೆ ಒಂದು ಆಸ್ತಿಯನ್ನು ಮತ್ತು ಅವರ ಹೆಂಡತಿ ಮತ್ತು ಮಗಳಿಗೆ ಮತ್ತೊಂದು ಆಸ್ತಿಯನ್ನು ವಿಲ್ ಮುಖಾಂತರ ಕೊಡುವುದಾಗಿ ಹೇಳಿದರು.

ಕೃಷ್ಣಪ್ಪ ನವರು ವಿಲ್ ನ್ನು ಯಾರ ಮುಖಾಂತರವೂ ಓದಿಸಿಕೊಂಡಿದ್ದರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಓದಿ ಹೇಳಿರುತ್ತೇನೆ ಮತ್ತು ಬೇರೆ ಯಾರಾದರೂ ಓದಿ ಹೇಳಿರುತ್ತಾರೋ ನನಗೆ ಗೊತ್ತಿಲ್ಲ. ನಾನು ಕೃಷ್ಣಪ್ಪ ನವರಿಗೆ ವಿಲ್ ನಲ್ಲಿ ಓದಿ ಹೇಳಿದಾಗ ಸುಮಾರು 11 ಗಂಟೆ ಇರಬಹುದು, ನನಗೆ ನೆನಪಿಲ್ಲ. ಸದರಿ ವಿಲ್ ನ್ನು ನಾನು 10 ನಿಮಿಷಗಳ ಕಾಲ ಓದಿರಬಹುದು. ಆ

ಸಮಯದಲ್ಲಿ ಸಾಕ್ಷಿದಾರರಾದ ಆಂಜನಪ್ಪ, ನಾನು, ಕೃಷ್ಣಪ್ಪ ನವರು ಇದ್ದೇವು. ಇನ್ನುಳಿದ ವ್ಯಕ್ತಿಗಳು ಯಾರು ಇದ್ದರು ಎಂದು ನನಗೆ ನೆನಪಿರುವುದಿಲ್ಲ. ಕೃಷ್ಣಪ್ಪ ನವರು ವಿಲ್ ನ್ನು ಬರೆಯುವ ಮುಂಚೆ ಡ್ರಾಫ್ಟ್ ಮಾಡಿರುವುದಿಲ್ಲ, ಆದರೆ ನೇರವಾಗಿ ದಾಖಲಾತಿಗಳನ್ನೆಲ್ಲ ಕೊಟ್ಟು ಟೈಪ್ ಮಾಡಿಸಿರುತ್ತಾರೆ. ವಿಲ್ ತಯಾರಾಗಲು ಸುಮಾರು 1 ಗಂಟೆ ಸಮಯ ಹಿಡಿದಿರಬಹುದು. ಕೃಷ್ಣಪ್ಪ ನವರಿಗೆ ವಿಲ್ ನ್ನು ಉಪ ನೋಂದಾಣಾಧಿಕಾರಿಗಳು ಓದಿ ಹೇಳಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಉಪ ನೋಂದಾಣಾಧಿಕಾರಿಗಳು ವಿಲ್ ನ್ನು ಓದಿ ಹೇಳಿರುವ ಬಗ್ಗೆ ದಾಖಲಾತಿಯಲ್ಲಿ ನಮೂದು ಮಾಡಿರುತ್ತಾರಾ ಎಂದರೆ ನನಗೆ ಗೊತ್ತಿಲ್ಲ. ನಾನು ವಿಲ್ ಗೆ ಸಹಿ ಮಾಡುವ ಕಾಲಕ್ಕೆ ಆಂಜನಪ್ಪ, ನಾನು ಮತ್ತು ಕೃಷ್ಣಪ್ಪ ನವರು ಇದ್ದೇವು. ನನಗೆ ಉಪ ನೋಂದಾಣಾಧಿಕಾರಿಗಳು ವಿಲ್ ನಲ್ಲಿ ಇರುವ ವಿಷಯದ ಬಗ್ಗೆ ತಿಳಿಸಿ ಹೇಳಿರುವುದಿಲ್ಲ. ನಾನು ಈ ದಿನ ಕೃಷ್ಣಪ್ಪನವರ ಅಣ್ಣ ಹನುಮಂತಯ್ಯ ನವರ ಜೊತೆ ಬಂದಿರುತ್ತೇನೆ ಎಂದರೆ ಸರಿ. ನಾನು ಮತ್ತು ಹನುಮಂತಯ್ಯ ನವರು ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಪರಿಚಯ ಎಂದರೆ ಸಾಕ್ಷಿಯು ನನಗೆ ಹನುಮಂತಯ್ಯ ನವರ ಪರಿಚಯ ಕೃಷ್ಣಪ್ಪ ನವರ ಮೂಲಕ ಆಗಿರುತ್ತದೆ ಎಂದು ನುಡಿಯುತ್ತಾರೆ. ನನಗೆ ಕೃಷ್ಣಪ್ಪ ನವರ ನೇರ ಪರಿಚಯ ಇರುವುದಿಲ್ಲ, ಹನುಮಂತಯ್ಯ ರವರ ಮೂಲಕ ಕೃಷ್ಣಪ್ಪ ನವರ ಪರಿಚಯ ಎಂದರೆ ಸುಳ್ಳು.

ನನ್ನ ವಿರುದ್ದ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಇರುತ್ತದೆ ಎಂದರೆ ಸರಿ. **ಸಾಕ್ಷಿಗೆ 4 ದಾಖಲಾತಿಗಳನ್ನು ತೋರಿಸಲಾಗಿ ಸದರಿ 4 ದಾಖಲಾತಿಗಳನ್ನು ಸಾಕ್ಷಿ ತನ್ನ ವಿರುದ್ದ ಇರುವ ಕ್ರಿಮಿನಲ್ ಮೊಕದ್ದಮೆಗಳು ಎಂದು ಸಾಕ್ಷಿ ಗುರುತಿಸಿದ ಮೇರೆಗೆ ನಿ ಡಿ 14 ರಿಂದ ನಿ ಡಿ 17 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಹಿಂಬರಹವನ್ನು ತೋರಿಸಲಾಗಿ ಸದರಿ ಹಿಂಬರಹದ ಪ್ರಕಾರ ನನ್ನ ಮೇಲೆ ಮೊಕದ್ದಮೆಗಳು ಇರಬಹುದು ಎಂದು ಸಾಕ್ಷಿ ಹೇಳಿದ್ದು ಸದರಿ ಹಿಂಬರಹನಮ್ನು ನಿ ಡಿ 18 ಎಂದು ಗುರುತಿಸಲಾಯಿತು.**

ಕೃಷ್ಣಪ್ಪ ನವರಿಗೆ ಕಿವಿ ಕೇಳಿಸದೆ ಇದ್ದ ಕಾರಣ ಅವರನ್ನು ಊರ ಜನರು ಯಾ ಯಾ ಎಂದು ಕರೆಯುತ್ತಿದ್ದರು ಎಂದರೆ ಗೊತ್ತಿಲ್ಲ. ಕೃಷ್ಣಪ್ಪ ನವರಿಗೆ ಕಿವಿ ಕೇಳಿಸದೇ ಇದ್ದ ಕಾರಣ ಕಿವುಡರ ಭಾಷೆಯಲ್ಲಿ ಓದಿ ಹೇಳಿರುವುದಕ್ಕೆ ನಿ ಪಿ 2 ರಲ್ಲಿ ಏನಾದರೂ ನಮೂದು ಮಾಡಿರುತ್ತಾರೆಯೇ ಎಂದರೆ ನನಗೆ ಗೊತ್ತಿಲ್ಲ. ನನಗೆ ಹನುಮಂತಯ್ಯ ರವರ ಪರಿಚಯ

ಇದ್ದು, ಅವರ ಮಾತು ಕೇಳಿ ವಿಲ್ ನ್ನು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹನುಮಂತಯ್ಯ ನವರು ನ್ಯಾಯಾಲಯಕ್ಕೆ ನನ್ನನ್ನು ಕರೆ ತಂದಿರುತ್ತಾರೆ ಮತ್ತು ಅವರಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೃಷ್ಣಪ್ಪ ನವರು ವಿಲ್ ಮಾಡುವ ಮುಂಚೆ ಕಾಯಿಲೆಯಿಂದ ನರಳುತ್ತಿದ್ದರು ಎಂದರೆ ಸಾಕ್ಷಿಯು ವಿಲ್ ಮಾಡುವ ಕಾಲಕ್ಕೆ ಅವರು ಆರೋಗ್ಯವಾಗಿದ್ದರು ಎಂದು ನುಡಿಯುತ್ತಾರೆ. ವಿಲ್ ನಲ್ಲಿ ಕೃಷ್ಣಪ್ಪನವರ ಆರೋಗ್ಯದ ಬಗ್ಗೆ ಬರೆದಿರುತ್ತಾರೋ ಇಲ್ಲವೋ ಎಂದು ನನಗೆ ಸರಿಯಾಗಿ ನೆನಪಿಲ್ಲ.

ಕೃಷ್ಣಪ್ಪನವರ ಆನಾರೋಗ್ಯ ಮತ್ತು ಅವರ ದೈಹಿಕ ಅಂಗ ವಿಕಲತೆಯನ್ನು ಬಳಸಿಕೊಂಡು ಅಣ್ಣ ತಮ್ಮಂದಿರು ವಿಲ್ ನ್ನು ಸೃಷ್ಟಿ ಮಾಡಿರುತ್ತಾರೆ ಎಂದರೆ ಸುಳ್ಳು. ಕೃಷ್ಣಪ್ಪನವರು ವಿದ್ಯಾವಂತರಾಗದೇ ಇದ್ದ ಕಾರಣ ಯಾವುದೆ ಮಾಹಿತಿ ನೀಡಿ ವಿಲ್ ನ್ನು ತಯಾರು ಮಾಡಿರುವುದಿಲ್ಲ, ಬದಲಾಗಿ ಕೃಷ್ಣಪ್ಪನವರ ಅಣ್ಣ ತಮ್ಮಂದಿರು ಮತ್ತು ನಾನು ಸೇರಿ ವಿಲ್ ನ್ನು ತಯಾರು ಮಾಡಿ, ಸೃಷ್ಟಿ ಮಾಡಿರುತ್ತಾರೆ ಎಂದರೆ ಸುಳ್ಳು. ಕೃಷ್ಣಪ್ಪನವರು ವಿಲ್ ಮಾಡಿಸುವ ಸಂದರ್ಭಕ್ಕೆ ಸ.ನಂ., ವಿಸ್ತೀರ್ಣ ಮತ್ತು ಚೆಕ್ ಬಂದಿಯನ್ನು ಹೇಳುವುದನ್ನು ನಾನು ಕೇಳಿಸಿಕೊಂಡಿರುತ್ತೇನೆಯೇ ಎಂದರೆ ಸಾಕ್ಷಿಯು ಕೃಷ್ಣಪ್ಪನವರು ದಾಖಲಾತಿ ತಂದಿದ್ದರು, ಅವರು ಹೇಳಿರುವ ಚೆಕ್ ಬಂದಿ , ವಿಸ್ತೀರ್ಣ ಮತ್ತು ಸ.ನಂ. ಬಗ್ಗೆ ನನಗೆ ಈಗ ನೆನಪಿಲ್ಲ. ಆ ದಿನ ಕೃಷ್ಣಪ್ಪ ನವರು ವಿಭಾಗಪತ್ರವನ್ನು ತಂದಿದ್ದರು. ಸದರಿ ವಿಭಾಗಪತ್ರವನ್ನು ನಾನು ಓದಿ ನೋಡಿರುತ್ತೇನೆ. ಸದರಿ ವಿಭಾಗಪತ್ರ ಯಾವ ದಿನ ನೋಂದಣಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅದು ಎಷ್ಟು ರೂ.ಗಳ ಛಾಪಾ ಕಾಗದದ ಮೇಲೆ ನೋಂದಣಿಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ವಿಭಾಗಪತ್ರ ಎಷ್ಟು ಹಾಳೆಗಳ ಮೇಲೆ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ವಿಭಾಗಪತ್ರದಲ್ಲಿ ಇರುವ ಸಾಕ್ಷಿದಾರರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ಯಾವುದೆ ಖುದ್ದು ಮಾಹಿತಿ ಇರುವುದಿಲ್ಲ. ನಾನು ಹನುಮಂತಯ್ಯ ನವರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮರುವಿಚಾರಣೆ ಃ ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು, ಮಾಗಡಿ.**

**ಓ ಎಸ್ ನಂಃ 329/2020**

**ಪಿ. ಡಬ್ಲ್ಯೂ ಃ 4**

**ದಿಃ 20.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್ ಎಸ್ ಎಸ್ ವಕೀಲರಿಂದ**

**ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

ನಿ ಪಿ 2 ರಲ್ಲಿ ನಾನು ಕೃಷ್ಣಪ್ಪ ನವರನ್ನು ಗುರುತಿಸಿ ಸಹಿ ಮಾಡಿರುತ್ತೇನೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನಿ ಪಿ 2 ಇ ಎಂದು ಗುರುತಿಸಲಾಯಿತು.

ಕೃಷ್ಣಪ್ಪ ನವರು ನಿ ಪಿ 3 ಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು, ಸದರಿ ಹೆಬ್ಬೆಟ್ಟಿನ ಗುರುತನ್ನು ನಾನೇ ಗುರುತಿಸಿದ್ದು, ಸದರಿ ಹೆಬ್ಬೆಟ್ಟಿನ ಗುರುತಿನ ಕೆಳಗೆ ಬರಹ ಬರೆದಿರುವುದು ಮತ್ತು ಅದರ ಕೆಳಗೆ ಇರುವ ಸಹಿ ನನ್ನದೇ ಆಗಿರುತ್ತದೆ ಎಂದು ಸಾಕ್ಷಿ ಸಹಿಯನ್ನು ಗುರುತಿಸಿದ್ದು ಅದನ್ನು ನಿ ಪಿ 3 ಎ ಎಂದು ಗುರುತಿಸಲಾಯಿತು.

ಕೃಷ್ಣಪ್ಪ ನವರು ನಿ ಪಿ 4 ಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು, ಸದರಿ ಹೆಬ್ಬೆಟ್ಟಿನ ಗುರುತನ್ನು ನಾನೇ ಗುರುತಿಸಿದ್ದು, ಸದರಿ ಹೆಬ್ಬೆಟ್ಟಿನ ಗುರುತಿನ ಕೆಳಗೆ ಬರಹ ಬರೆದಿರುವುದು ಮತ್ತು ಅದರ ಕೆಳಗೆ ಇರುವ ಸಹಿ ನನ್ನದೇ ಆಗಿರುತ್ತದೆ ಎಂದು ಸಾಕ್ಷಿ ಸಹಿಯನ್ನು ಗುರುತಿಸಿದ್ದು ಅದನ್ನು ನಿ ಪಿ 4 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗಾಗಿ ಪ್ರತಿವಾದಿ 1 ಮತ್ತು 2 ರವರ ಪರ ಶ್ರೀ ಎಂ ಜಿ ಅರ್ ವಕೀಲರು ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**